ತದೇಕಚಿತ್ತದಿಂದ ನಿಟ್ಟಿಸಿದೆ. ಅವಳು ಎದ್ದು ನಿಂತಳು. ಅವಳು ಎದ್ದು ನಿಂತಾಗ ಅವಳ ಸೆರಗು ಗಾಳಿಗೆ ಹಾರಿ ಫಡಫಡಿಸಿತು. ಥೇಟ್ ಆನಂದಿಯ ಕಥೆಯಲ್ಲಿ, ಬರುವ ಕೊನೆಯ ಸಾಲಿನಂತೆ. ಬಸ್ಸಿಗೆ ಕೈಬೀಸುತ್ತ ನಿಂತ ಅವಳ ಸೆರಗು ಫಡಫಡಿಸಿದಂತೆ! ಆ ಕ್ಷಣ ನಾನು ಜಿಲ್ಲನೆ ಬೆವರಿದೆ. ಒಳಗೆ ಉಂಟಾದ ಎಂಥದ್ದೋ ಬಗೆಯ ಒತ್ತಡಕ್ಕೆ, ಹಾಗೇ ಎದ್ದು ಅವಳನ್ನು ಅಪ್ಪಿಕೊಂಡು ಬಿಡಬೇಕು ಅನಿಸಿಬಿಟ್ಟಿತ್ತು. ನನ್ನನ್ನು ಓದಿದಳೋ ಎಂಬಂತೆ ಅವಳು ಸೆರಗನ್ನು ಸೆಳೆದು ಮೈತುಂಬಾ ಹೊದ್ದುಕೊಂಡು ಹುಸಿನಗುತ್ತ ಮತ್ತೆ ಚೇರಿನಲ್ಲಿ ಕುಳಿತು ಪರಸ್ಪರ ಕೈಯುಜ್ಜಿಕೊಂಡಳು. ಆ ಕ್ಷಣ ಅವಳು ಏಕಾಏಕಿ ಬಂದದ್ದು, ಹಕ್ಕಿನಿಂದ ಜಗಳಾಡಿದಂತೆ ಮಾತಾಡಿದ್ದು, ಕಣ್ಸೆರೆ ಹಿಡಿದದ್ದು, ಎದ್ದದ್ದು, ಕೂತದ್ದು, ನಕ್ಕದ್ದು ಎಲ್ಲವೂ ಚಂದವೆನಿಸಿ ಅವಳ ಮೇಲೆ ಆಸಕ್ತಿ ಹುಟ್ಟಿತ್ತು. ಇವಳೊಂದಿಗಿನ ಈ ಭೇಟಿ ಕೂಡ ಒಂದು ಚಂದದ ಕಥೆಯಾಗುವಷ್ಟು ಚಂದವಿದೆಯೇನೋ ಅನಿಸಿ, ಅವಳೊಂದಿಗೆ ಮಾತು ಬೆಳೆಸುವ ಹುಕಿ ಹುಟ್ಟಿತು.

'ಗೋಪಣ್ಣಾ' ನಾನು ಕೂಗಿ ಕರೆದೆ. ನಾನೇನಾದರೂ ಹೇಳುವ ಮೊದಲೇ ಗೋಪಣ್ಣ ಚಹಾದ ಟ್ರೇಯೊಂದಿಗೆ ಹಾಜರಾಗಿದ್ದರು. ಅದೇ ನಿರ್ಭಾವ ಮುಖಮುದ್ರೆಯೊಡನೆ.

'ನೀವು ನಾನು ಸಣ್ಣ ವಯಸಿನಲ್ಲಿ ಓದಿದ ಕಥೆಯೊಂದರ ನಾಯಕಿಯ ಹಾಗೆ ಇದ್ದೀರ' ನಾನು ಟೀ ತೆಗದುಕೊಳ್ಳುತ್ತ ಹೇಳಿದೆ.

'ಓ ಹಾಗೇನು? ಏನದು ಕಥೆ?'

'ನಿಮ್ಮನ್ನು ನೋಡಿದಾಗ, ನಿಮ್ಮ ನಡೆನುಡಿ ಚಹರೆ ಎಲ್ಲವೂ ನನ್ನ ಮನದಾಳದಲ್ಲಿ ಉಳಿದುಕೊಂಡಿದ್ದ ಆನಂದಿಯೆಂಬ ಪಾತ್ರವನ್ನು ನೆನಪಿಸಿತು, ಕಥೆಯ ಬಗ್ಗೆ ಹೇಳುವುದಾದರೆ ಅದು ಒಂದು ರಾತ್ರಿಯ ಕಥೆ ಅಷ್ಟೇ. ಸುಮ್ಮನೆ ಹೇಳಬಹುದಾದರೆ ಒಬ್ಬಾತ, ಕಥೆಯ ನಾಯಕ ಅದೊಮ್ಮೆ ಯಾವುದೋ ಊರಿಗೆ ಹೋಗಿ, ಅಲ್ಲಿ ಬಸ್ಸು ಮಿಸ್ಸಾಗಿ ಅಲ್ಲೇ ಉಳಿಯಬೇಕಾದ ಒಂದು ಸಂದರ್ಭ ಬರುತ್ತದೆ. ರಾತ್ರಿ ಎಲ್ಲಿ ತಂಗುವುದೆಂಬ ಗೊಂದಲದಲ್ಲಿರುವಾಗ ಯಾರೋ ಒಬ್ಬರು ಕೊಟ್ಟ ಸೂಚನೆಯಂತೆ ಆನಂದಿಯ ಮನೆಗೆ ಹೋಗುತ್ತಾನೆ. ಅಲ್ಲಿ ಅದಾಗಲೇ ಯಾರೋ ತಂಗಿರುತ್ತಾರೆ, ಕೆಲವು ಲಾರಿ ಡ್ರೈವರ್‌ಗಳು ಪಯಣದ ಸುಸ್ತು ಕಳೆಯಲು, ರಾತ್ರಿ ಇವಳ ಮನೆಯಲ್ಲಿ ತಂಗಿ ಮರುದಿನ ಬೆಳಗ್ಗೆ ಹೊರಡುವುದೂ ಇದೆ. ಅವಳ ಮನೆಯಲ್ಲಿ ಒಂದು ದೊಡ್ಡ ನಾಯಿಯಿದೆ. ಗೂರಲು ರೋಗದಿಂದ ನರಳುವ ಗಂಡನೋ, ಅಪ್ಪನೋ ಯಾರೋ ಒಬ್ಬರಿದ್ದಾರೆ. ಆ ರಾತ್ರಿ ಅವನಿಗೆ ಕೆಮ್ಮು ಹೆಚ್ಚಾಗಿ ಅವಳು ಪರದಾಡುವಂತಾಗುತ್ತದೆ. ಮನೆ ಅಂಥಾ ವಸತಿಯಾದದ್ದೇನೂ ಅಲ್ಲ. ಅವಳು ಬಡವಳು ಕೂಡ. ಅವಳು ಯಾವುದನ್ನೂ ಹೇಳಿಕೊಳ್ಳದೇ ಹೋದರೂ,ಅವಳ ಸರಳ ಸೌಂದರ್ಯ, ಹೃದ್ಯವಾದ ನಗು, ಅವಳ ಒಂಟಿತನ, ಅವಳ ಅಸಹಾಯಕತೆ, ಅವಳ ನಿರ್ಮಲ ಸ್ನೇಹ ಇವೆಲ್ಲವೂ ಎದುರಿಗಿರುವವರನ್ನು ತಲುಪುವಷ್ಟು ಪ್ರಾಮಾಣಿಕವಾಗಿವೆ. ಆ ರಾತ್ರಿ ಅವಳ ಬದುಕನ್ನು ಕಂಡು, ಮರುದಿನ ಬೆಳಗ್ಗೆ ಅವನು ಎದ್ದು ಹೊರಡುತ್ತಾನೆ. ಅವಳು ತನ್ನ ನಿರ್ಮಲ ನಗುವಿನೊಂದಿಗೆ ಕೈಬೀಸುತ್ತ ಅವನಿಗೆ ವಿದಾಯ ಹೇಳುತ್ತಾಳೆ. ಇಷ್ಟೇ ಕಥೆ. ಆದರೆ ಈ ಕಥೆ ಕಾಡುತ್ತದೆ. ಅದನ್ನು ಒಳಗಿಳಿಸಿಕೊಳ್ಳುತ್ತಾ ಓದುವಾಗ, ಅವಳು ಆ ಗೂರಲು ರೋಗದವನೊಂದಿಗೆ ಬದುಕುತ್ತ, ಯಾರೋ ದಾರಿಹೋಕರಿಗೆ ಆಶ್ರಯವಾಗಿರುತ್ತ, ಯಾರನ್ನೂ ಯಾವುದಕ್ಕೂ ದೂರದೆ ಸುಮ್ಮನೆ ಬದುಕುತ್ತ ಹೋಗುವುದನ್ನು ಮನಗಾಣಿಸಿಕೊಳ್ಳುವಾಗ ಅವಳು ಮನದೊಳಗೆ ಕದಲದೆ ಕುಳಿತುಬಿಡುತ್ತಾಳೆ. ನನಗಂತೂ ಹಾಗೆ ಇವತ್ತಿಗೂ ಅದನ್ನೊಮ್ಮೆ ಹುಡುಕಿ ಮತ್ತೆ ಓದಬೇಕೆನಿಸುತ್ತದೆ. ಆದರೆ ಆ ಬಾಲ್ಯಕಾಲದಲ್ಲಿ ಎದೆಯೊಳಗಿಳಿದು ಕುಳಿತ ಆನಂದಿ ಈಗಿನ ಓದಿನಲ್ಲಿ ಬೇರೆಯದೇ ಬಗೆಯಲ್ಲಿ ಕಾಣಸಿಗುವಳೋ ಎಂಬ ಸಂದೇಹ ದಿಗಿಲು ಹುಟ್ಟಿಸುತ್ತದೆ. ಅದಕ್ಕೇ ನಾನದನ್ನು ಮತ್ತೆ ಹುಡುಕುವ ಗೋಜಿಗೇ ಹೋಗಿಲ್ಲ...ಆದರೆ..'

'ಹೌದು, ಎಲ್ಲವನ್ನೂ ಬಿಚ್ಚಿಡುವ ಕಥೆಗಿಂತ, ಓದುಗನ ಮನಸಲ್ಲಿ ಬೆಳೆಯುವ ಕಥೆ ಅವನೊಳಗೆ ನಿಲ್ಲುತ್ತದೆ. ಎಲ್ಲ ಕಥೆಗಾರರಿಗೂ ಇದು ಸಾಧ್ಯವಿಲ್ಲ. ಎಷ್ಟು ಹೇಳಬೇಕು, ಎಷ್ಟು ಹೇಳಬಾರದು ಎಂಬುವುದನ್ನು ಸರಿಯಾಗಿ ನಿರ್ಧರಿಸಲು ಬರುವುದಿಲ್ಲ' ಅವಳು ನನ್ನ ಮಾತನ್ನು ತುಂಡರಿಸಿ ನಡುವೆ ಮಾತಾಡಿದಳು.

'ನಿಜ, ಆದರೆ ಹಾಗೆ ಇದನ್ನು ಹೇಳಬೇಕು, ಹೇಳಬಾರದು ಎಂದೆಲ್ಲ ಕರಾರುವಾಕ್ಕಾದ ಪ್ಲಾನಿನೊಂದಿಗೆ ಕಥೆ ಬರೆಯಲು ಬರುವುದಿಲ್ಲ.